



ಭತ್ತದ ನಾಟಿ ಮಾಡುವ ಸಂಭ್ರಮದಲ್ಲಿ ಮಕ್ಕಳು



ಕರೆದುಕೊಂಡು ಶಿಕ್ಷಕರ ತಂಡ ಗದ್ದೆಗೆ ಹೋಗುವುದು ಅಣಶಿ ಶಾಲೆಯಲ್ಲಿ ರೂಢಿ. ಅಲ್ಲಿ ಒತ್ತೊತ್ತಾಗಿ ಬೆಳೆದ ಸಸಿಗಳನ್ನು ನಯವಾಗಿ ಕಿತ್ತು, ನೆಡಲು ಅನುಕೂಲವಾಗುವ ಹಾಗೆ ಪೊತ್ತೆ ಮಾಡುವ, ಸಸಿಗಳನ್ನು ನಾಟಿ ಮಾಡುವ, ನೀರು ಹರಿದುಹೋಗಲು ಬಿಲಗು ಮಾಡುವ ಚಟುವಟಿಕೆಗಳಲ್ಲಿ ಶಿಕ್ಷಕರು, ಮಕ್ಕಳು ತೊಡಗಿಕೊಳ್ಳುತ್ತಾರೆ. ಮಳೆ ಬಂದಾಗ ಕಂಬಳಿಗೊಪ್ಪೆ ಹೊದೆಯುವ, ಒದ್ದೆಯಾಗುವ, ಮಣ್ಣ ಘಮಲು ಮೈಮನಸ್ಸಿಗೆ ಹರಡುವ, ಶಿಕ್ಷಕರು, ಅಡುಗೆಯವರು, ಪಾಲಕರು, ವಿದ್ಯಾರ್ಥಿಗಳು ಒಟ್ಟಾಗಿ ನಾಟಿ ಮಾಡುವ ಅಪರೂಪದ ದಿನವದು. ಆ ಸಂದರ್ಭಕ್ಕಾಗಿ ಶಾಲೆಯ ವಿದ್ಯಾರ್ಥಿಗಳು ಶಾಲೆ ಶುರುವಾದಾಗಿನಿಂದ ಕಾಯುತ್ತಲೇ ಕುಳಿತಿರುತ್ತಾರೆ.

ಪ್ರತಿ ವರ್ಷ ಶಾಲೆಯ ಹಿರಿಯ ವಿದ್ಯಾರ್ಥಿಗಳಷ್ಟೇ ಗದ್ದೆಗೆ ತೆರಳುತ್ತಿದ್ದರು. 'ನಲಿಕಲಿ' ಮಕ್ಕಳು ಪುಟಾಣಿಗಳೆಂದು ಅವರನ್ನು ಕರೆದೊಯ್ಯುತ್ತಿರಲಿಲ್ಲ. ಆ ಎಳೆಯರಿಗೂ ಭತ್ತದ ಸಸಿ ನಾಟಿ ಮಾಡುವ, ಗದ್ದೆ ಬೆಳೆದಾಗ ಕೊಯ್ಲು ಮಾಡುವ, ಭತ್ತದ ಕಾಳು ಸಂಗ್ರಹಿಸುವ ವಿಧಾನವನ್ನು ಪ್ರತ್ಯಕ್ಷವಾಗಿ ತೋರಿಸಲು ಶಾಲೆಯ ಎದುರು ಒಂದು ಜಾಗವನ್ನು ಗೊತ್ತುಪಡಿಸಿದ್ದಾರೆ. ಹಿರಿಯ ವಿದ್ಯಾರ್ಥಿಗಳು ಅಕ್ಕೋರ ಮಾರ್ಗದರ್ಶನದಲ್ಲಿ ನೆಲವನ್ನು ಹದಗೊಳಿಸಿ ಬೀಜ ಬಿತ್ತಿ, ಸಸಿ ನೆಟ್ಟು ಆ ಸಸಿಗಳು ದೊಡ್ಡದಾಗುವುದನ್ನು ನೋಡುತ್ತ 'ನಲಿಕಲಿ' ಮಕ್ಕಳು ದಿನವೂ ಕುತೂಹಲದ ನೋಟವನ್ನಿಟ್ಟುಕೊಂಡಿದ್ದಾರೆ. ಭತ್ತದ ಪೈರಿನ ನೆನಪು ಶಾಶ್ವತವಾಗಿರಲು ಅಕ್ಕೋರು ಮಕ್ಕಳಿಗೆ 'ಭತ್ತದ ತೋರಣ' ಮಾಡುವ ವಿಧಾನ ಕಲಿಸಿದ್ದಾರೆ. ಮುಖ್ಯೋಪಾಧ್ಯಾಯರ ಕೋಣೆಯಲ್ಲಿ ಮಕ್ಕಳ ಭತ್ತದ ಕಲಾಕೃತಿಗಳು ಶಾಲೆಯ ಸಂದರ್ಶನಕ್ಕೆ ಬಂದ ಸಾಹೇಬರ ಕಣ್ಣಿಗೂ ಬಿದ್ದಿವೆ.

ಹಿಂದೆ ಅಣಶಿ ಶಾಲೆಯಲ್ಲಿ ಅಡುಗೆಯವಳಾಗಿ ಸೇವೆ ಸಲ್ಲಿಸಿದ್ದ ಪ್ರತಿಮಾ ಕಾಜುಗಾರ ಈ ವರ್ಷ ಕೂಡ ಅಕ್ಕೋರು ಹೇಳಿದರೆಂದು ತನ್ನ ಗದ್ದೆಯನ್ನು ಮಕ್ಕಳ ಪ್ರಾಯೋಗಿಕ ಕಣವನ್ನಾಗಿ ಬಿಟ್ಟುಕೊಟ್ಟಿದ್ದಾಳೆ. ಕಳೆದ 11 ವರ್ಷದಿಂದ ಅವಳ ಗದ್ದೆಯ ಒಂದು ಭಾಗ ಶಾಲೆಯ ಗದ್ದೆಯಾಗುತ್ತದೆ. ನಾಟಿ ಕೆಲಸ ಶುರುವಾಗುತ್ತದೆ. ಹೀಗಾಗಿಯೇ ಈ ಬಾರಿ ಅಕ್ಕೋರು ಮಕ್ಕಳ ಗಮನಕ್ಕೆ ತಂದು ಗದ್ದೆಗೆ ಹೋದ ಹೊತ್ತಲ್ಲಿ, ಗದ್ದೆ ನಾಟಿಯ ಪಾಠ ಮಾಡುವ ಎಸ್‌ಡಿಎಂಸಿ ಸದಸ್ಯರು ಹಾಗೂ ಪಾಲಕರನ್ನೆಲ್ಲ ಸೇರಿಸಿ ಪ್ರತಿಮಾಳಿಗೆ ಗದ್ದೆಯಲ್ಲಿಯೇ ಸೀರೆ ಮತ್ತು ಕಂಬಳಿ ನೀಡುವುದರ ಮೂಲಕ ಗೌರವಿಸಿದ್ದು ಕಂಡು ಪಾಲಕರು ಖುಷಿಯಾಗಿದ್ದಾರೆ. ಚೂರು ಗುಟ್ಟು ಬಿಡದೆ ಈ ರೀತಿ ಮಕ್ಕಳು ಸನ್ಮಾನಿಸಿದ್ದು ಕಂಡು ಪ್ರತಿಮಾಳ ಮನಸು ತುಂಬಿ ಬಂದಿದೆ.

ಬೀಸಿದ ತಂಪನೆಯ ಗಾಳಿಗೆ ಇದೀಗಷ್ಟೇ ಮಕ್ಕಳು ನೆಟ್ಟ ಸಸಿಗಳು ಅಲುಗಿ ಹರಸಿವೆ. ವೇದಿಕೆಯಾಗಿ ರೂಪುಗೊಂಡ ಗದ್ದೆ ಒಂದು ನಮೂನಿ ಖುಷಿಯಲ್ಲಿ ಬೀಗುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in